**ಕರ್ನಾಟಕ ಸರ್ಕಾರ**

ಸಂಖ್ಯೆ: ಆಕುಕ 30 ಅಮುಕಾ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 02.02.2021.

**ಸುತ್ತೋಲೆ**

ವಿಷಯ: ಕೋವಿಡ್ 19-ಸಾಮಾಜಿಕ/ಧಾರ್ಮಿಕ/ ಕ್ರೀಡಾ ಚಟುವಟಿಕೆಗಳು/ ಮನೋರಂಜನೆ / ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಪಾಲಿಸಬೇಕಾದ ಮಾರ್ಗಸೂಚಿಗಳು.

ಉಲ್ಲೇಖ: 1) ಕೇಂದ್ರ ಗೃಹ ಕಾರ್ಯದರ್ಶಿ, ಇವರ ಆದೇಶ ಸಂಖ್ಯೆ: 40-3/2020-DM-I(A), ದಿನಾಂಕ: 27.1.2021

2) ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಇವರ ಪತ್ರ ಸಂಖ್ಯೆ: 29.1.2021.

3) ರಾಜ್ಯ ಮಟ್ಟದ ಕೋವಿಡ್ 19 ತಾಂತ್ರಿಕ ಸಲಹಾ ಸಮಿತಿಯ 70ನೇ ಸಭಾ ನಡಾವಳಿಗಳು, ದಿನಾಂಕ: 31.1.2021.

4) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಮದುವೆ ಹಾಗೂ ಇತರೆ ಸಮಾರಂಭಗಳನ್ನು ನಡೆಸುವ ಕುರಿತು ಆದೇಶ ದಿನಾಂಕ:14.05.2020.

*****

ಪ್ರಸ್ತುತ, ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕದ ಅಬ್ಬರವು ಕಡಿಮೆಯಾಗಿದ್ದರೂ ಸಹ, ಸೋಂಕು ಹರಡುವಿಕೆಯ ಅಪಾಯವು ಇನ್ನೂ ಚಾಲ್ತಿಯಲ್ಲಿದೆ. ಆದ್ದರಿಂದ, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು, ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದು (ಕನಿಷ್ಠ 1 ಮೀಟರ್ ನಷ್ಟು), ಆಗಿಂದಾಗ್ಗೆ ಹ್ಯಾಂಡ್ ಸ್ಯಾನಿಟೈಸರ್‌ನ ಬಳಕೆ, ಸೋಪು ಹಾಗೂ ನೀರಿನಿಂದ ಕೈಗಳನ್ನು ಶುಚಿಗೊಳಿಸುವುದು, ಥರ್ಮಲ್ ಸ್ಕ್ರೀನಿಂಗ್ ನಡೆಸುವುದು, ಜ್ವರ ಹಾಗೂ ಸೋಂಕಿನ ಇತರ ಲಕ್ಷಣಗಳಿರುವವರನ್ನು ಪತ್ತೆ ಹಚ್ಚಿ ಪರೀಕ್ಷೆಗೆ ಒಳಪಡಿಸುವುದು, ಇತ್ಯಾದಿ ಕೋವಿಡ್-19 ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವುದು ವಿವೇಕಯುತವೂ ಮತ್ತು ಉಪಯುಕ್ತವಾಗಿರುತ್ತದೆ. ಯಾವುದೇ ನಿರ್ದಿಷ್ಟ ಸಮಯದಲ್ಲಿ ಸಾರ್ವಜನಿಕರು ಒಂದೆಡೆ ಸೇರುವ ಸ್ಥಳಗಳಾದ ಸಮಾರಂಭದ ಹಾಲ್‌ಗಳು, ಸ್ಟಾಲ್‌ಗಳು / ಬೂತ್‌ಗಳು ಮತ್ತು ಶೌಚಾಲಯಗಳಲ್ಲಿ, ಜನರ ಸಂಖ್ಯೆಯನ್ನು ನಿರ್ಧರಿಸಲು MHA/MoHFW ಮಾರ್ಗಸೂಚಿಗಳ ಅನ್ವಯ ನಿರ್ಧರಿಸಲಾಗುತ್ತದೆ. ಅದರಂತೆ, ಯಾವುದೇ ಹಾಲ್ / ಸಭಾ ಭವನದಲ್ಲಿ ಪ್ರತಿ ವ್ಯಕ್ತಿಗೆ 3.25 sq. m ನಂತೆ ಸ್ಥಳಾವಕಾಶವು ಲಭ್ಯವಿರುವುದು ಕಡ್ಡಾಯವಾಗಿರುತ್ತದೆ. (1,000 sq. m ವಿಸ್ತೀರ್ಣವಿರುವ ಹಾಲ್‌ನಲ್ಲಿ ಗರಿಷ್ಠ 376 ವ್ಯಕ್ತಿಗಳು ಸೇರಬಹುದು ; 500 sq. m ವಿಸ್ತೀರ್ಣವಿರುವ ಹಾಲ್‌ನಲ್ಲಿ ಗರಿಷ್ಠ 158 ವ್ಯಕ್ತಿಗಳು ಸೇರಬಹುದು).

ಈ ಹಿಂದೆ ಸಾಮಾಜಿಕ/ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಹೊರಡಿಸಲಾದಂತಹ ಸುತ್ತೋಲೆಗಳು/ ಸಲಹೆಗಳನ್ನು ಒಳಗೊಂಡಂತೆ ವಿವಿಧ ಸ್ಥಳಗಳಲ್ಲಿ/ ಚಟುವಟಿಕೆಗಳಲ್ಲಿ ಅನುಮತಿಸಬಹುದಾದ ವ್ಯಕ್ತಿಗಳ ಸಂಖ್ಯೆ ಈ ಕೆಳಗಿನಂತಿರಬೇಕು :

1. **ಸಾಮಾಜಿಕ ಸಮಾರಂಭಗಳು** – ಮದುವೆಗಳು, ಜನ್ಮದಿನಾಚರಣೆ, ಮರಣ, ಶವಸಂಸ್ಕಾರ/ಸಮಾಧಿ ಮತ್ತು ಇತರೆ ಸಮಾರಂಭಗಳು/ ಆಚರಣೆಗಳಲ್ಲಿ ದೈಹಿಕ ದೂರವನ್ನು ಕಾಪಾಡಿಕೊಳ್ಳಲು ಮತ್ತು ಕೋವಿಡ್-19 ಸೋಂಕಿನ ಹರಡುವಿಕೆಯನ್ನು ತಡೆಯುವ ರೀತಿಯಲ್ಲಿ ತೆರೆದ ಮತ್ತು ಮುಚ್ಚಿದ ಪ್ರದೇಶಕ್ಕೆ @ 3.25 sq. m ಪ್ರತಿ ವ್ಯಕ್ತಿಗೆ (1,000 sq. m ವಿಸ್ತೀರ್ಣವಿರುವ ಹಾಲ್‌ನಲ್ಲಿ ಗರಿಷ್ಠ 376 ವ್ಯಕ್ತಿಗಳು ಸೇರಬಹುದು : 500 sq. m ವಿಸ್ತೀರ್ಣವಿರುವ ಹಾಲ್‌ನಲ್ಲಿ ಗರಿಷ್ಠ 158 ವ್ಯಕ್ತಿಗಳು ಸೇರಬಹುದು). ಮೇಲಿನ ಸಮಾರಂಭಗಳಿಗೆ ಗರಿಷ್ಠ **500** ವ್ಯಕ್ತಿಗಳ ಮಿತಿಯನ್ನು ಅನುಮತಿಸಲಾಗಿದೆ.

2. **ಈಜುಕೊಳಗಳು ಹಾಗೂ ಕ್ರೀಡಾ ಚಟುವಟಿಕೆಗಳು** – ಯುವಜನ ಸೇವೆ ಮತ್ತು ಕ್ರೀಡೆಗಳು ಮಂತ್ರಾಲಯ, ಭಾರತ ಸರ್ಕಾರ, ಇವರ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳು, ದಿನಾಂಕ: 30.1.2021, ಇವುಗಳ ಅನ್ವಯ ಕ್ರಮ ಕೈಗೊಳ್ಳುವುದು.
https://yas.nic.in/sports/standard-operating-procedures-sop-and-guidelines-operation-swimming-pools ಈ ಲಿಂಕ್ ನಲ್ಲಿ ಮಾಹಿತಿ ಲಭ್ಯವಿದೆ.

3. **ಸಿನೆಮಾ ಹಾಲ್‌ಗಳು** – ಮಾಹಿತಿ ಹಾಗೂ ಪ್ರಸಾರಣ ಮಂತ್ರಾಲಯ, ಭಾರತ ಸರ್ಕಾರ, ಇವರ ಮಾರ್ಗಸೂಚಿಯಂತೆ, ದಿನಾಂಕ:01.02.2021 ರಿಂದ ಸಿನೆಮಾ ಹಾಲ್ ಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗಿದೆ.

   https://mib.gov.in/sites/default/files/FINAL%20SOP%20for%20Exhibition%20of%20Films%20%281%29.pdf ಈ ಲಿಂಕ್ ನಲ್ಲಿ ಮಾಹಿತಿ ಲಭ್ಯವಿದೆ.

   ಆದಾಗ್ಯೂ, ಕೋವಿಡ್-19ರ ಪ್ರಸ್ತುತ ಪರಿಸ್ಥಿತಿಯನ್ನು ಹಾಗೂ ಎರಡನೇ ಅಲೆಯು ಬರುವ ಸಾಧ್ಯತೆಯನ್ನೂ ಸಹ ಪರಿಗಣಿಸಿ ಹೆಚ್ಚಿನ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದೂ ಸೇರಿದಂತೆ, **ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ 28ನೇ ಫೆಬ್ರವರಿ 2021ರವರೆಗೆ ಸಿನೆಮಾ ಹಾಲ್‌ಗಳಲ್ಲಿ 50% ಪ್ರೇಕ್ಷಕರಿಗೆ ಮಾತ್ರವೇ ಅವಕಾಶ ಕಲ್ಪಿಸಲು ಸೂಚಿಸಲಾಗಿದೆ.**

4. **ಕಛೇರಿಗಳು ಹಾಗೂ ಕೆಲಸ ನಿರ್ವಹಿಸುವ ಸ್ಥಳಗಳು** – ಅವಕಾಶವಿರುವ ಸ್ಥಳಗಳಲ್ಲಿ ಮನೆಯಿಂದಲೇ ಕೆಲಸ ನಿರ್ವಹಿಸುವ ವ್ಯವಸ್ಥೆಯನ್ನು (work from home ) ಮುಂದುವರೆಸಬಹುದಾಗಿದೆ. ಇಲ್ಲದಿದ್ದಲ್ಲಿ ಎಲ್ಲರೂ ಕೆಲಸಕ್ಕೆ ಹಾಜರಾಗಲು ಅನುಮತಿಸಬಹುದು. ಪಾಳಿಗಳಲ್ಲಿ (shift system) ಕೆಲಸ ನಿರ್ವಹಣೆಯನ್ನೂ ಮುಂದುವರೆಸುವುದು.

5. **ಕೈಗಾರಿಕಾ ಪ್ರದೇಶಗಳು ಹಾಗೂ ವಾಣಿಜ್ಯ ಸಂಸ್ಥೆಗಳು** – ಸಿಬ್ಬಂದಿಗಳ ಸಂಪೂರ್ಣ ಹಾಜರಾತಿ. ಆದಾಗ್ಯೂ, ಪಾಳಿಗಳಲ್ಲಿ (shift system) ಕೆಲಸ ನಿರ್ವಹಣೆಯನ್ನೂ ಮುಂದುವರೆಸುವುದು.

6. **ಅಂಗಡಿಗಳು ಹಾಗೂ ಮಾಲ್ ಗಳು ; ಮಲ್ಟಿ ಪ್ಲೆಕ್ಸ್‌ಗಳು ಹಾಗೂ ಮನೋರಂಜನಾ ಪಾರ್ಕ್‌ಗಳು** – ಸದರಿ ಸ್ಥಳಗಳ ವಿಸ್ತೀರ್ಣದ ಆಧಾರದ ಅನ್ವಯ, ಈ ಪ್ರದೇಶಗಳ ಒಳಗೆ ಜನರು ಗುಂಪು ಸೇರದಂತೆ ಕ್ರಮವಹಿಸಲು , ಸಾರ್ವಜನಿಕರ ಪ್ರವೇಶವನ್ನು ನಿಯಂತ್ರಿಸುವುದು. ಹೆಚ್ಚು ಪ್ರೇಕ್ಷಕರನ್ನು ಆಕರ್ಷಿಸುವ ಆಚರಣೆಗಳನ್ನು ದೂರವಿಡುವುದು.

7. **ಹೋಟೇಲ್‌ಗಳು ಹಾಗೂ ರೆಸ್ಟೋರೆಂಟುಗಳು** – ಗರಿಷ್ಠ ಗ್ರಾಹಕರ ಸಂಖ್ಯೆಯನ್ನು ಮೀರುವಂತಿಲ್ಲ.

8. **ಮೆಟ್ರೋ ರೈಲುಗಳು** – ಭಾರತ ಸರ್ಕಾರದ ಮಾರ್ಗಸೂಚಿಯಂತೆ / ನಿಗದಿತ ಪ್ರಯಾಣಿಕರ ಸಂಖ್ಯೆಯನ್ನು ಮೀರಲು ಅವಕಾಶವಿರುವುದಿಲ್ಲ.

9. **ಯೋಗ ಕೇಂದ್ರಗಳು ಹಾಗೂ ಜಿಮ್ನೇಶಿಯಂಗಳು** – ಹಾಲ್‌ಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಪ್ರತಿ ವ್ಯಕ್ತಿಗೆ 3.25_sq. meter ನಂತೆ ಸ್ಥಳಾವಕಾಶ ಕಲ್ಪಿಸುವುದು. ಹೆಚ್ಚು ಜನರು ಗುಂಪು ಸೇರುವುದನ್ನು ನಿಯಂತ್ರಿಸಲು ಪಾಳಿ ವ್ಯವಸ್ಥೆಯನ್ನು ಪಾಲಿಸುವುದು.

10. **ಶಾಲೆಗಳು ಹಾಗೂ ಇತರ ಶೈಕ್ಷಣಿಕ ಸಂಸ್ಥೆಗಳು** – ಸಂಬಂಧಪಟ್ಟ ಇಲಾಖೆಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ ಅಗತ್ಯ ಸಮಾಲೋಚನೆಯ ನಂತರ, ಪ್ರತ್ಯೇಕವಾಗಿ, ಕಾಲಕಾಲಕ್ಕೆ ಪ್ರಮಾಣಿತ ಕಾರ್ಯಾಚರಣೆಯ ವಿಧಾನವನ್ನು ಪ್ರಕಟಿಸಿವೆ.

11. **ವ್ಯಾಪಾರ ವಸ್ತು ಪ್ರದರ್ಶನಗಳು, ಇತ್ಯಾದಿ** – ಕೋವಿಡ್ 19 ಹರಡುವಿಕೆಯನ್ನು ತಡೆಗಟ್ಟುವ ಕ್ರಮಗಳ ಅನುಷ್ಠಾನದೊಂದಿಗೆ ವಸ್ತು ಪ್ರದರ್ಶನಗಳನ್ನು ಆಯೋಜಿಸಲು ಭಾರತ ಸರ್ಕಾರದ ಪ್ರಮಾಣಿತ ಕಾರ್ಯಚರಣೆ ವಿಧಾನಗಳನ್ನು ಪಾಲಿಸಬೇಕು. ಮಾಹಿತಿಯು https://commerce.gov.in/whats-new/ ಈ ಲಿಂಕ್‌ನಲ್ಲಿ ಲಭ್ಯವಿದೆ.

12. **ಚುನಾವಣೆಗಳು, ಏರೋ ಇಂಡಿಯಾ ಪ್ರದರ್ಶನ, ಇತ್ಯಾದಿ ವಿಶೇಷ ಆಚರಣೆಗಳ** ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚನೆಯ ನಂತರ. ಸಂಬಂಧಪಟ್ಟ ಇಲಾಖೆಗಳು ನಿರ್ದಿಷ್ಟ ಮಾರ್ಗಸೂಚಿಗಳನ್ನು ಪ್ರಕಟಿಸುತ್ತವೆ.

ಸಾರ್ವಜನಿಕ ಸ್ಥಳಗಳಲ್ಲಿ ಜನರು ಗುಂಪು ಸೇರುವುದನ್ನು ತಪ್ಪಿಸಲು, ಸಾಮಾನ್ಯವಾಗಿ ವಿವಿಧ ಆಚರಣೆಗಳನ್ನು ವರ್ಚುವಲ್ ಮಾಧ್ಯಮದ ಮೂಲಕ ಕೈಗೊಳ್ಳುವಂತೆ ಅಥವಾ ತೆರೆದ/ ಸೂಕ್ತ ಗಾಳಿ – ಬೆಳಕಿನ ವ್ಯವಸ್ಥೆ ಇರುವ ಸ್ಥಳಗಳಲ್ಲಿ ನಡೆಸತಕ್ಕದ್ದು.

**(ಪಿ. ರವಿ ಕುಮಾರ್)**
**ಸರ್ಕಾರದ ಮುಖ್ಯ ಕಾರ್ಯದರ್ಶಿ**

**ಇವರಿಗೆ:**

1. ಆಯುಕ್ತರು, ಬಿಬಿಎಂಪಿ
2. ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
4. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
5. ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳು
6. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ
7. ಎಲ್ಲಾ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು.

**ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ:**

1. **ಅಪರ ಮುಖ್ಯ ಕಾರ್ಯದರ್ಶಿ, ಆಕುಕ ಸೇವೆಗಳು**
2. **ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)**
3. **ಆಯುಕ್ತರು, ಆಕುಕ ಸೇವೆಗಳು**
4. **ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ,**
5. ನಿರ್ದೇಶಕರು, ಆಕುಕ ಸೇವೆಗಳು
6. **ಮಾನ್ಯ ಆಕುಕ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು**
7. **ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ**